ದೇಶದಲ್ಲಿ, 'ಮಹಿಳೆಯ ಆದೇಶವನ್ನು ಪುರುಷರು ಪಾಲಿಸಲು ಸಿದ್ಧವಿಲ್ಲ' ಎನ್ನುತ್ತದೆ ಸರ್ಕಾರ! ಭಾರತದ ರಾಷ್ಟ್ರಪತಿ, ಭಾರತದ ಸಶಸ್ತ್ರ ಸೇನೆಯ 'ಕಮಾಂಡರ್ ಇನ್ ಚೀಫ್' ಕೂಡಾ ಆಗಿರುತ್ತಾರೆ. 2007ರಿಂದ 2012ರವರೆಗೆ ಪ್ರತಿಭಾ ಪಾಟೀಲ್ ಅವರು ರಾಷ್ಟ್ರಪತಿಗಳಾಗಿದ್ದಾಗ, ಆಕೆ ಸಶಸ್ತ್ರ ಸೇನೆಯ 'ಸುಪ್ರೀಂ ಕಮಾಂಡರ್' ಆಗಿದ್ದರು. ಹೀಗಿದ್ದೂ, 21ನೇ ಶತಮಾನದಲ್ಲಿ ಸರ್ಕಾರ 19ನೇ ಶತಮಾನದ ವಾದಗಳನ್ನು ಪುನಃ ಎಳೆತಂದು ಸಮಾನತೆಯ ಹಾದಿಗೆ ಅಡ್ಡಲಾಗಿ ಮಲಗಿಸಿತ್ತು. ದಶಕ ದಶಕಗಳು ಸಮಾನತೆಗಾಗಿ ಹೋರಾಡಿದ ಮಹಿಳೆಯರು ಇಂದಿಗೂ ಕೂಡಾ ವಿಶ್ರಮಿಸುವಂತಿಲ್ಲ ಎಂದು ಈ ಘಟನೆಯಿಂದ ಸ್ಪಷ್ಟವಾಗುತ್ತದೆ.

ಶತಮಾನಗಳಿಂದ ಒಂದು ಜಾತಿ, ಒಂದು ವರ್ಗ, ಒಂದು ಲಿಂಗದ ಜನರಿಗೆ ಅವಕಾಶಗಳನ್ನು ನೀಡದೆ, ಅವರಲ್ಲಿ ತಮ್ಮ ಸಾಮರ್ಥ್ಯದ ಬಗ್ಗೆ ಕೀಳರಿಮೆ ತರಲು ದುಡಿದ ತಾರತಮ್ಯದ ಪ್ರಧಾನ ಸಂಸ್ಕೃತಿಯೇ ಇಂದು ಕೂಡಾ ಮುಂದುವರೆದಿರುವುದು ವಿಷಾದದ ಸಂಗತಿ. ಮಹಿಳೆಯರು ತಮಗೆ ಹಕ್ಕಿನಿಂದ ಬರಬೇಕಿದ್ದ ಹುದ್ದೆ, ಬಡ್ತಿಗಳನ್ನು ಕೋರ್ಟಿನ ಮೆಟ್ಟಿಲು ಏರಿ, ದಶಕದ ಹೋರಾಟದಲ್ಲಿ ಪಡೆಯಬೇಕಾಯಿತು ಎಂಬುದು ಮತ್ತಷ್ಟು ಶೋಚನೀಯ. ಇಂತಹ ವಿವರಣೆಗಳನ್ನು ಕೊಟ್ಟ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತು ಎಂಬುದು ಮಾತ್ರ ಸಮಾಧಾನದ ವಿಷಯ.

ಇದರಾಚೆಗೂ ಸರಕಾರ ನೀಡಿದ ವಿವರಣೆ ಏನಿತ್ತು?

'ಮಹಿಳೆ ಮತ್ತು ಪುರುಷರ ದೈಹಿಕ ಸ್ಥಿತಿಯು ವಿಭಿನ್ನವಾಗಿದೆ. ಆದ್ದರಿಂದ ಮಹಿಳೆ ಮತ್ತು ಪುರುಷ ಅಧಿಕಾರಿಯನ್ನು ಸಮಾನವಾಗಿ ಪರಿಗಣಿಸಲು ಸಾಧ್ಯವಾಗದು. ಮಹಿಳೆಗೆ ಕೌಟುಂಬಿಕವಾಗಿಯೂ ಹೆಚ್ಚಿನ ಜವಾಬ್ದಾರಿಗಳು ಇರುತ್ತವೆ'.

ಮನೆ ಮಕ್ಕಳ ಜವಾಬ್ದಾರಿಯೆಲ್ಲ ಹೆಣ್ಣಿನದು ಎಂದು ಸೂಚಿಸುತ್ತಾ, ಅದರಲ್ಲಿ ಪುರುಷರ ಜವಾಬ್ದಾರಿಯನ್ನು ಗೌಣವಾಗಿಸುವ ವಾದವಿದು.

ಇದರಾಚೆಗೆ ಹೆಣ್ಣು ಮತ್ತು ಗಂಡಿನ ನಡುವೆ ದೈಹಿಕ ವ್ಯತ್ಯಾಸಗಳಿವೆ ಎನ್ನುತ್ತದೆ. ಆದರೆ ಅವು ವ್ಯತ್ಯಾಸಗಳು ಮಾತ್ರ, ಹೆಚ್ಚುಗಾರಿಕೆಗಳಲ್ಲ. ಕೇವಲ ಗಂಡು–ಹೆಣ್ಣುಗಳ ನಡುವೆ ವ್ಯತ್ಯಾಸಗಳಿಲ್ಲ, ಗಂಡು ಗಂಡಿನ ನಡುವೆಯೂ, ಹೆಣ್ಣು ಹೆಣ್ಣಿನ ನಡುವೆಯೂ ವ್ಯತ್ಯಾಸಗಳಿವೆ. ಆದರೆ ಈ ವ್ಯತ್ಯಾಸಗಳು, ವಿಭಜನೆಯ/ವಿಂಗಡನೆಯ ಗೆರೆಗಳಾಗಬಾರದು. ಕರ್ಣಂ ಮಲ್ಲೇಶ್ವರಿ ಎತ್ತಿದಷ್ಟು ತೂಕವನ್ನು ನಮ್ಮ ಮನೆಯ ಎಷ್ಟು ಜನ ಸಾಮಾನ್ಯ ಗಂಡಸರು ಎತ್ತಬಲ್ಲರು ಹೇಳಿ? ಅವಕಾಶ ಮತ್ತು ತರಬೇತಿ, ಆತ್ಮಸ್ಥೈರ್ಯ ಮತ್ತು ಪ್ರೋತ್ಸಾಹ ಪವಾಡವನ್ನು ಮಾಡಬಲ್ಲದು. ಹೀಗಿದ್ದೂ ಬಹಳ ಹಿಂದೆಯೇ 'ಅನಾಟಮಿ ಈಸ್ ಡೆಸ್ಟಿನಿ' ಎಂದು ಸಾರಿದ್ದ ಪುರುಷ ವಿಜ್ಞಾನಿಗಳ ಮಾತನ್ನು

2020ರ ಜನವರಿ 26ರಂದು ಗಣರಾಜ್ಯೋತ್ಸವದ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆದ ಪರೇಡ್‌ನಲ್ಲಿ ಯುದ್ಧಕೌಶಲ ಪ್ರದರ್ಶಿಸುತ್ತಿರುವ ಸಿಆರ್‌ಪಿಎಫ್ ತುಕಡಿಯ ಮಹಿಳೆಯರು

